**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್ ಮತ್ತು ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಪ್ರಕಾಶ್ ಕೆ.ರಾಥೋಡ್ ರವರುಗಳು ನಿಯಮ-330ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

******

ಪ್ರಶ್ನೆ:-

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಕಾಣಿಯೂರಿನಲ್ಲಿ ನೆಲೆಸಿರುವ ಉಪವಲಯ ಅರಣ್ಯಾಧಿಕಾರಿ ಶ್ರೀ ಸಂಜೀವ ಪೂಜಾರಿ ಅವರು ಕುಟುಂಬ ಸಮೇತ ರಾತ್ರಿ ಮಲಗಿ ನಿದ್ರಿಸುತ್ತಿದ್ದ ವೇಳೆ ಮನೆಯ ಅಂಗಳದಲ್ಲಿ 15 ರಿಂದ 20 ಜನರಿದ್ದ ತಂಡವು ಕೈಬಾಂಬುಗಳನ್ನು ಸಿಡಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಕೊಲೆ ಬೆದರಿಕೆ ಹಾಕಿರುವ ಘಟನೆ ನಡೆದಿರುತ್ತದೆ.

ಸದರಿಯವರು ಈ ಸಂಬಂಧ ಪೊಲೀಸರಿಗೆ ದೂರು ನೀಡಿದ್ದು, ಗೃಹ ಸಚಿವರಿಗೆ ಪತ್ರವನ್ನು ಸಹ ಬರೆದಿರುತ್ತಾರೆ. ಉಪ ವಲಯ ಅರಣ್ಯಾಧಿಕಾರಿ ಸಂಜೀವ ಪೂಜಾರಿಯವರು ಭಜನೆ ಹಾಗೂ ಭಜಕರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಹಿಂದೂ ಧಾರ್ಮಿಕ ಭಾವನೆಗೆ ಧಕ್ಕೆ ತರುವ ರೀತಿಯಲ್ಲಿ ಲೇಖನಗಳನ್ನು ಪ್ರಕಟಿಸಿರುವುದಾಗಿ ಆರೋಪಿಸಿ, ಅವರ ವಿರುದ್ಧ ಕೂಡಲೇ ಕಾನೂನು ಕ್ರಮ ಕೈಗೊಳ್ಳುವಂತೆ ಕೆಲವು ಹಿಂದೂ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ್ದವು. ಸರ್ಕಾರ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳದೆ ಗೂಂಡಾಗಳಿಗೆ ಸಹಕಾರ ನೀಡಿರುವುದು ವರದಿಯಾಗಿರುತ್ತದೆ.

ಹಾಗೇಯೇ, ದಕ್ಷಿಣ ಕನ್ನಡ ಜಿಲ್ಲೆಯ ಸೂರತ್ಕಲ್‌ನ ಕೃಷ್ಣಾಪುರದಲ್ಲಿ 'ಲತೀಫಾ ಸ್ಟೋರ್' ನಡೆಸುತ್ತಿದ್ದ ಜಲೀಲ್ ಎನ್ನುವ ವ್ಯಕ್ತಿಯ ಮೇಲೆ ಕೆಲವು ದುಷ್ಕರ್ಮಿಗಳು ಚೂರಿ ಇರಿದು ಸಾವಿಗೆ ಕಾರಣವಾಗಿರುವ ಪ್ರಕರಣ ಜರುಗಿದ್ದು, ಇಂತಹ ಪುನರಾವರ್ತಿತ ಶಾಂತಿ ಕದಡುವ ಘಟನೆಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು ಸರ್ಕಾರ ನಡವಳಿಕೆಗಳನ್ನು ನಾವು ಖಂಡಿಸುತ್ತೇವೆ. ಈ ವಿಷಯವು ಸಾರ್ವಜನಿಕವಾಗಿ ಮಹತ್ವವಾಗಿರುವುದರಿಂದ ದಿನಾಂಕ 26.12.2022 ರಂದು ಸದನದಲ್ಲಿ ಪ್ರಸ್ತಾಪಿಸಲು ನಿಯಮ 59ರ ಕೆಳಗೆ ನಿಲುವಳಿ ಸೂಚನೆಯನ್ನು ನೀಡುತ್ತಿದ್ದೇವೆ.

ಉತ್ತರ:-

ದಿನಾಂಕ 22-12-2022 ರಂದು ಪಿರ್ಯಾದಿ ಸಚಿನ್ ರೈ ಪ್ರಾಯ: 28 ವರ್ಷ, ತಂದೆ: ಕಿಟ್ಟಣ್ಣ ರೈ, ಪೂವಾಜೆ ಮನೆ, ಪೆರುವಾಜೆ ಗ್ರಾಮ, ಸುಳ್ಯ ತಾಲ್ಲೂಕು ರವರು ಆರೋಪಿತ ಉಪವಲಯ ಅರಣ್ಯಾಧಿಕಾರಿ ಸಂಜೀವ ಪೂಜಾರಿ ಕಾಣಿಯೂರುರವರು ಭಾರತ ದೇಶ ಮತ್ತು ಹಿಂದೂ ಸಂತ ಸಮಾಜದ ಬಗ್ಗೆ ಅತೀ ಕೀಳುಮಟ್ಟಕ್ಕೆ ಬಂದಿದೆ ಎನ್ನುವ ಕಥೆ ಕಟ್ಟಿ ತನ್ನ ಫೇಸ್ ಬುಕ್ ನಲ್ಲಿ ಸಂದೇಶ ರವಾನೆ ಮಾಡಿರುವುದಲ್ಲದೇ ನಂತರ ದಿನಾಂಕ 20.12.2022 ರಂದು ಬೆಳಿಗ್ಗೆ ಸುಮಾರು 9:00 ಗಂಟೆಗೆ ಕುಣಿತ ಭಜನೆಯಿಂದ ಮಲಗಿದ ಭಜನೆ ಎಂಬ ತಲೆಬರಹದಲ್ಲಿ ಸುಳ್ಳು ಮತ್ತು ಆಧಾರ ರಹಿತವಾದ ವಿಚಾರವನ್ನು, ತಪ್ಪು ಮಾಹಿತಿಯಿಂದ ಕೂಡಿದಂತಹ ಸಂದೇಶವನ್ನು ಸಾಮಾಜಿಕ ಜಾಲತಾಣವಾದ ಫೇಸ್ ಬುಕ್ ನಲ್ಲಿ ರವಾನಿಸಿ ಅಪ್ರಾಪ್ತ ವಯಸ್ಸಿನ ಹೆಣ್ಣು ಮತ್ತು ಗಂಡುಗಳು ಅನೈತಿಕ ಚಟುವಟಿಕೆಯಲ್ಲಿ ಭಜನೆಯೆಂಬ ಹೆಸರಿನಲ್ಲಿ ತೊಡಗಿಸಿಕೊಳ್ಳುತ್ತಾರೆ ಎಂಬಂತೆ ಬಿಂಬಿಸಿ ಗುಡ್ಡದ ಮರದಡಿಯಲ್ಲಿ ಮಲಗಿ ಭಜನೆ ಮಾಡುವವರೆಗೆ ಎಂಬಿತ್ಯಾದಿ ಕೀಳು ಅಭಿರುಚಿಯ, ಅವಹೇಳನಕರವಾದ ಮಹಿಳೆಯ ಚಾರಿತ್ರ್ಯಕ್ಕೆ ಗೌರವಕ್ಕೆ ಧಕ್ಕೆ ತರುವ ಒಳಾರ್ಥ ಪದ ಬಳಕೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿ ವ್ಯಾಪಕವಾಗಿ ಪ್ರಸಾರ ಮಾಡಿರುವುದಲ್ಲದೇ ಜಾತಿ ದ್ವೇಷ ಬರುವಂತೆ ಕೋಮುಗಲಭೆ ತುಂಬುವಂತೆ ಮುಸ್ಲಿಂ ಮತ್ತು ಕ್ರೈಸ್ತ ಹೆಸರನ್ನು ಉಲ್ಲೇಖಿಸಿ ಹಿಂದೂ ಸಮಾಜದ ಕೋಟ್ಯಾಂತರ ಜನರು ನಂಬಿಕೊಂಡು ಆರಾಧಿಸಿಕೊಂಡು ಬಂದಿರುವ ಆಂಜನೇಯ ದೇವರನ್ನು ಹಿಯಾಳಿಸಿ, ಸಮಾಜದ ಭಿನ್ನ ವರ್ಗಗಳ ಮಧ್ಯದಲ್ಲಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದು ಮಾನಸಿಕವಾಗಿ ಕೆರಳಿಸಿ ಸಂಘಟನೆಗಳ ಮಧ್ಯೆ ಗಲಭೆ ಹುಟ್ಟುವಂತೆ ಸಾಮಾಜಿಕ ಸಾಮರಸ್ಯ ಸ್ವಾಸ್ಥ್ಯ ಕೆಡುವ ರೀತಿಯಲ್ಲಿ ಅಲ್ಲದೇ ಒಂದು ಸಮಾಜದ ನಂಬಿಕೆ ಆಚಾರ ವಿಚಾರಗಳಿಗೆ ನೋವಾಗುವ ಅವಹೇಳನಕಾರಿ ಸಂದೇಶ ಕಳುಹಿಸಿರುವುದಲ್ಲದೇ ದೇಶದ ರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿ ಯವರ ಬಗ್ಗೆ ಸಾವುಗಳನ್ನು

ಉಲ್ಲೇಖಿಸಿ 9880457569 ನೇ ಮೊಬೈಲ್ ನಂಬರಿನ ವಾಟ್ಸ್ ಅಪ್ ಸ್ಟೇಟಸ್ ನಲ್ಲಿ ಸಂದೇಶ ರವಾನೆ ಮಾಡಿರುವುದಾಗಿ ನೀಡಿರುವ ದೂರಿನಂತೆ ಬೆಳ್ಳಾರೆ ಪೊಲೀಸ್ ಠಾಣೆ. ಅ.ಕ್ರ. 101/2022 ಕಲಂ 505(2), 295ಎ ಐಪಿಸಿ ರಂತೆ ಪ್ರಕರಣ ದಾಖಲಿಸಿಕೊಂಡು, ಪ್ರಸ್ತುತ ಪ್ರಕರಣವು ತನಿಖೆಯಲ್ಲಿರುತ್ತದೆ.

ಮುಂದುವರೆದು ಈ ದಿನ ದಿನಾಂಕ: 26-12-2022 ರಂದು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಕಾಣಿಯೂರಿನಲ್ಲಿ ನೆಲೆಸಿರುವ ಉಪವಲಯ ಅರಣ್ಯಾಧಿಕಾರಿ ಶ್ರೀ ಸಂಜೀವ ಪೂಜಾರಿ ಅವರು ದಿನಾಂಕ 20-12-2022 ರಂದು ಕುಟುಂಬ ಸಮೇತ ರಾತ್ರಿ ಮಲಗಿ ನಿದ್ರಿಸುತ್ತಿದ್ದ ವೇಳೆ ಮನೆಯ ಅಂಗಳದಲ್ಲಿ 15 ರಿಂದ 20 ಜನರಿದ್ದ ತಂಡವು ಕೈಬಾಂಬುಗಳನ್ನು ಸಿಡಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಕೊಲೆ ಬೆದರಿಕೆ ಹಾಕಿರುವ ಘಟನೆ ನಡೆದಿರುವುದಾಗಿ ದೂರಿನ ಮೇಲೆ ಬೆಳ್ಳಾರೆ ಠಾಣಾ ಅ.ಕ್ರ. 105/2022 ಕಲಂ 143, 149, 504, 506, 447 ಐಪಿಸಿ ಮತ್ತು ಕಲಂ 9 ಬಿ(1) ಬಿ ಸ್ಫೋಟಕ ಕಾಯ್ದೆ 1984 ರೀತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುವುದು ಇರುತ್ತದೆ.

ದಿನಾಂಕ:24-12-2022 ರಂದು ಸಂಜೆ 19.49 ಗಂಟೆಗೆ ಸೂರತ್ಕಲ್, 4ನೇ ಬ್ಲಾಕ್ ಕಾಟಿಪಳ್ಳದಲ್ಲಿ ಫ್ಯಾನ್ಸಿ ಅಂಗಡಿಯನ್ನಿಟ್ಟುಕೊಂಡು ವ್ಯಾಪಾರ ನಡೆಸುತ್ತಿದ್ದ ಅಬ್ದುಲ್ ಜಲೀಲ್ ಎಂಬುವರಿಗೆ ಅಪರಿಚಿತ ವ್ಯಕ್ತಿಗಳಿಬ್ಬರು ಮಾರಕಾಯುಧದಿಂದ ಹಲ್ಲೆ ಮಾಡಿ ತೀವ್ರತರದ ಗಾಯಗೊಳಿಸಿದ್ದು, ಗಾಯ ಗೊಂಡ ಅಬ್ದುಲ್ ಜಲೀಲ್‌ರವರನ್ನು ಅಲ್ಲಿ ಸೇರಿದ ಸಾರ್ವಜನಿಕರು ಮಂಗಳೂರು ಮುಕ್ಕ ಶ್ರೀನಿವಾಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಿದ್ದು, ಗಾಯಗೊಂಡ ಅಬ್ದುಲ್ ಜಲೀಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ. ಈ ಘಟನೆಗೆ ಸಂಬಂಧಿಸಿದಂತೆ ಮೃತ ಜಲೀಲ್ ರವರ ಚಿಕ್ಕಪ್ಪ ಅಬ್ದುಲ್ ಖಾದರ್ ಎಂಬವರು ನೀಡಿದ ದೂರಿನಂತೆ ಸೂರತ್ಕಲ್ ಪೊಲೀಸ್ ಠಾಣೆಯಲ್ಲಿ ಅ.ಕ್ರ:109/2022 ಕಲಂ : 448,302 ಜೊತೆಗೆ 34 ಐ.ಪಿ.ಸಿ.ಯಂತೆ ಪ್ರಕರಣ ದಾಖಲಾಗಿರುತ್ತದೆ.

ನಂತರ ಮೃತ ಜಲೀಲ್‌ರವರ ಮೃತದೇಹವನ್ನು ಮುಕ್ಕ ಶ್ರೀನಿವಾಸ್ ಆಸ್ಪತ್ರೆಯಿಂದ ಮಂಗಳೂರಿನ ಎ.ಜೆ. ಆಸ್ಪತ್ರೆಗೆ ಸಾಗಿಸಿ ಅಲ್ಲಿ ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಿ ಮೃತದೇಹವನ್ನು ಮುಂದಿನ ದಫನ ಕಾರ್ಯಕ್ಕೆ ಮೃತನ ಸಂಬಂಧಿಕರಿಗೆ ಬಿಟ್ಟುಕೊಡಲಾಗಿದೆ.

ಪರಿಸ್ಥಿತಿಯ ನಿಯಂತ್ರಣಕ್ಕಾಗಿ ಸೂರತ್ಕಲ್, ಕಾವೂರು, ಪಣಂಬೂರು ಮತ್ತು ಬಜಪೆ ಠಾಣಾ ಪರಿಸರದಲ್ಲಿ ಕಲಂ:144 ದಂ.ಪ್ರ.ಸಂ.ಪ್ರಕಾರ ದಿನಾಂಕ: 25.12.2022 ರಿಂದ 27.12.2022ರವರೆಗೆ ನಿಷೇಧಾಜ್ಞೆಯನ್ನು ಜಾರಿಗೊಳಿಸಿರುವುದಲ್ಲದೇ, ಮದ್ಯದ ಅಂಗಡಿಗಳನ್ನು ಮುಚ್ಚುವ ಕ್ರಮಕೈಗೊಳ್ಳಲಾಗಿದೆ.

ಈ ಸಂಬಂಧ ಸ್ಥಳೀಯವಾಗಿ ಬಂದೋಬಸ್ತ್ ಕರ್ತವ್ಯಕ್ಕೆ ಪೊಲೀಸ್ ಅಧಿಕಾರಿ/ಸಿಬ್ಬಂದಿ ಮತ್ತು ಕೆ.ಎಸ್.ಆರ್.ಪಿ/ಸಿ.ಎ.ಆರ್ ತುಕಡಿಗಳನ್ನು ನೇಮಿಸಲಾಗಿದ್ದು ಪರಿಸರದಲ್ಲಿ ಪರಿಸ್ಥಿತಿಯು ಶಾಂತವಾಗಿದ್ದು ಪ್ರಕರಣವು ತನಿಖೆಯಲ್ಲಿದೆ.

**ಹೆಚ್‌ಡಿ 730 ಎಸ್‌ಎಸ್‌ಟಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು